ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

4

ಇಲಾಖೆ / ವಿಷಯ : DEPARTMENT / SUBJECT: ಮುಖ್ಯಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 17/9/2020

# ಮುಖ್ಯಮಂತ್ರಿ ಪರಿಹಾರ ನಿಧಿ ಆನ್‌ಲೈನ್ ತಂತ್ರಾಂಶಕ್ಕೆ ಚಾಲನೆ

**ಸಂ.ಕ.ಸಮಾಚಾರ, ಬೆಂಗಳೂರು** 17/9/20

ಮುಖ್ಯಮಂತ್ರಿಗಳ ಪರಿಹಾರ ನಿಧಿಯ ಕಾರ್ಯವಿಧಾನವನ್ನು ವಿಳಂಬರಹಿತ ಮತ್ತು ಪಾರದರ್ಶಕವಾಗಿ ನಿರ್ವಹಿಸುವ ಸಲುವಾಗಿ ಆನ್‌ಲೈನ್ ತಂತ್ರಾಂಶವನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಬುಧವಾರ ಲೋಕಾರ್ಪಣೆ ಮಾಡಿದರು.

ಸಿಎಂ ಗೃಹಕಚೇರಿ ಕೃಷ್ಣಾದಲ್ಲಿ ನಡೆದ ಸಮಾರಂಭದಲ್ಲಿ ಹೊಸ ವ್ಯವಸ್ಥೆಗೆ ಚಾಲನೆ ಕೊಡಲಾಯಿತು. ಈ ವೇಳೆ ಮಾತನಾಡಿದ ಸಿಎಂ, ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಬಡವರು ಮತ್ತು ಅಶಕ್ತ ಜನರ ವೈದ್ಯಕೀಯ ವೆಚ್ಚಕ್ಕಾಗಿ ಪರಿಹಾರವನ್ನು ಒದಗಿಸಲು ನಿಯಮಾನುಸಾರ ಕ್ರಮಕೈಗೊಳ್ಳಲಾಗುತ್ತಿದೆ ಎಂದರು.

ನಮ್ಮ ಸರ್ಕಾರಕ್ಕೆ ಈವರೆಗೂ ಪರಿಹಾರ ಕೋರಿ ಒಟ್ಟು 14,275 ಅರ್ಜಿಗಳು ಬಂದಿದೆ. ಈ ಪೈಕಿ 11,530ಕ್ಕೆ 61.88 ಕೋಟಿ ರೂ.ಗಳ ಪರಿಹಾರ ಬಿಡುಗಡೆ ಮಾಡಲಾಗಿದೆ. 587 ಪ್ರಕರಣಗಳಿಗೆ 9.16 ಕೋಟಿ ರೂ.ಗಳ ಭರವಸೆ ಪತ್ರಗಳನ್ನು ಸಂಬಂಧಿಸಿದ ಆಸ್ಪತ್ರೆಗಳಿಗೆ ವಿತರಿಸಲಾಗಿದೆ. ಒಟ್ಟು 12,117 ಪ್ರಕರಣಗಳಿಗೆ 71.04 ಕೋಟಿ ರೂ.ಗಳ ಪರಿಹಾರವನ್ನು ವಿತರಿಸಲಾಗಿದೆ.

- ವಿಳಂಬ ರಹಿತ ಸೇವೆಗೆ ಆದ್ಯತೆ
- ದಾಖಲೆಗಳ ಸಲ್ಲಿಕೆಯೂ ಸರಳೀಕರಣ

ಮಧ್ಯವರ್ತಿಗಳಿಂದ ಬಡ ಅರ್ಜಿದಾರರ ಶೋಷಣೆ ಹಾಗೂ ನಕಲಿ ಫಲಾನುಭವಿಗಳ ಹಾವಳಿಯನ್ನು ತಪ್ಪಿಸಿ, ಅರ್ಹರಿಗೆ ವಿಳಂಬರಹಿತ ಸೇವೆ ನೀಡುವುದು ಇದರ ಉದ್ದೇಶವಾಗಿದೆ. ಬಿ.ಪಿ.ಎಲ್. ಪಡಿತರ ಚೀಟಿ ಮತ್ತು ಆಧಾರ್ ಗುರುತಿನ ಚೀಟಿಯ ಡಾಟಾ ಮಾನದಂಡವಾಗಿದ್ದು ಅರ್ಜಿದಾರರಿಗೆ ನೇರವಾಗಿ ಅವರ ಬ್ಯಾಂಕ್ ಖಾತೆಗೆ ಪರಿಹಾರವನ್ನು ಈ ತಂತ್ರಾಂಶದ ಮೂಲಕ ಒದಗಿಸಲಿದೆ. ಅಲ್ಲದೆ ಬೆಂಗಳೂರು ಒನ್, ಕರ್ನಾಟಕ ಒನ್, ಬಾಪೂಜಿ ಸೇವಾ ಕೇಂದ್ರ, ಸೇವಾ ಸಿಂಧು ಕೇಂದ್ರಗಳಲ್ಲಿ ಹಾಗೂ ಯಾವುದಾದರೂ ಅಂತರ್ಜಾಲ ಕೇಂದ್ರಗಳಲ್ಲಿ ಸಾರ್ವಜನಿಕರು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು. ಅರ್ಜಿಯ ಸ್ಥಿತಿಗತಿ ಆನ್‌ಲೈನ್ ಮೂಲಕವೇ ಸಿಗಲಿದ್ದು, ಹಣ ಬಿಡುಗಡೆ ಇತ್ಯಾದಿ ವಿವರಗಳನ್ನು ಎಸ್‌ಎಂಎಸ್ ಮುಖೇನ ಒದಗಿಸಲಾಗುತ್ತದೆ.